<u>**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.**</u>

<u>**ಸಿ.ಸಿ. ನಂ.**</u> 2460/2025

ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | : | ಈರೇಶ್ | ಸಿ.ಡಬ್ಲ್ಯೂ-12 |
| ತಂದೆಯ ಹೆಸರು | : | ಲಿಂಗಪ್ಪ | ಪಿ.ಡಬ್ಲ್ಯೂ-07 |
| ವಯಸ್ಸು | : | 30 ವರ್ಷ | |
| ಉದ್ಯೋಗ | : | ಪಿ ಎಸ್ ಐ | |
| ವಾಸಸ್ಥಳ | : | ಚಳ್ಳಕೆರೆ | ದಿಃ 18-02-2026. |

<u>**ಮುಖ್ಯ ವಿಚಾರಣೆ: ಮಾನ್ಯ ಎ.ಪಿ.ಪಿ. ರವರಿಂದಃ**</u>

ದಿನಾಂಕ 17.06.2025 ರಿಂದ ಇಲ್ಲಿಯವರೆಗೆ ನಾನು ಚಳ್ಳಕೆರೆ ಪೊಲೀಸ್ ಠಾಣೆಯಲ್ಲಿ ಪಿ ಎಸ್ ಐ . ಅಂತ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 05.10.2025 ರಂದು ಚಾಸಾ-11 ರವರಿಂದ ಈ ಪ್ರಕರಣದ ಕಡತವನ್ನು ಹೆಚ್ಚಿನ ತನಿಖೆಗಾಗಿ ಪಡೆದುಕೊಂಡಿರುತ್ತೇನೆ.

ದಿನಾಂಕ 05.10.2025 ರಂದು ಠಾಣಾ ಮೊಕದ್ದಮೆ ಸಂಖ್ಯೆ 377/2025 ರಲ್ಲಿ ಆರೋಪಿಯು ನೀಡಿದ ಸ್ವ-ಇಚ್ಛಾ ಹೇಳಿಕೆಯ ಮೇರೆಗೆ ಈ ಪ್ರಕರಣದಲ್ಲಿ ಕೆಎ-16 ಇಎನ್ - 1269 ಬೈಕನ್ನು ಕಳ್ಳತನ ಮಾಡಿರುವುದಾಗಿ ಆರೋಪಿ ಒಪ್ಪಿಕೊಂಡಿರುತ್ತಾರೆ. ಅದೇ ದಿನ ಚಾಸಾ-4 ಮತ್ತು 5 ರವರ ಸಮಕ್ಷಮ ಚಳ್ಳಕೆರೆ ಟೌನ್ ನ ವಾಸವಿ ಕಾಲೇಜಿನ ಬಳಿ, ಬಸ್ ನಿಲ್ದಾಣದ ಪಕ್ಕ ಆರೋಪಿಯು ತೋರಿಸಿದ ಸ್ಥಳದಲ್ಲಿ ಸಂಜೆ 04-20 ರಿಂದ 04-45 ರವರೆಗೆ ಮಹಜರ್ ಕ್ರಮ ಜರುಗಿಸಿರುತ್ತೇನೆ.

ಸಾಕ್ಷಿಗೆ ನಿಪಿ.6 ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿಃ 6(ಸಿ) ಅಂತ ಗುರುತಿಸಲಾಯಿತು.

ದಿನಾಂಕ 08.10.2025 ರಂದು ಆರೋಪಿಯಿಂದ ಕಳ್ಳತನ ಮಾಡಿದ ಬೈಕನ್ನು ಸ್ವೀಕರಿಸಿದ್ದ ಚಾಸಾ-6 ರವರಿಗೆ ಬೈಕನ್ನು ಹಾಜರು ಪಡಿಸಲು ನೋಟೀಸ್ ನೀಡಿರುತ್ತೇನೆ. ಚಾಸಾ-6 ರವರು ಅದೇ ದಿನ ಹಾಜರು ಪಡಿಸಿದ ಕೆಎ-16 ಇಎನ್-1269 ಬೈಕನ್ನು ಆರೋಪಿತನ ಹಾಗೂ ಚಾಸಾ-4 ಮತ್ತು 5 ರವರ ಸಮಕ್ಷಮದಲ್ಲಿ ಬೆಳಿಗ್ಗೆ 11-45 ರಿಂದ 12.15 ರವರೆಗೆ ಪಂಚನಾಮೆ ಕ್ರಮ ಜರುಗಿಸಿ ಅಮಾನತ್ತು ಪಡಿಸಿಕೊಂಡಿರುತ್ತೇನೆ.

ಸಾಕ್ಷಿಗೆ ನಿಪಿ.7 ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿಃ 7(ಸಿ) ಅಂತ ಗುರುತಿಸಲಾಯಿತು.

ಪಂಚನಾಮೆ ಸಮಯದಲ್ಲಿ ಚಾಸಾ-10 ರವರು ಭಾವಚಿತ್ರವನ್ನು ತೆಗೆದಿರುತ್ತಾರೆ. ಮಹಜರ್ ಸಮಯದಲ್ಲಿ ತೆಗೆದ ಭಾವಚಿತ್ರಕ್ಕೆ ಸಂಬಂಧಿಸಿದದಂತೆ ಚಾಸಾ-10 ರವರಿಂದ ಸಾಕ್ಷ್ಯ ಅಧಿನಿಯಮದಂತೆ ಪ್ರಮಾಣ ಪತ್ರವನ್ನು ಪಡೆದಿರುತ್ತೇನೆ.

ಚಾಸಾ-7 ರವರು ನಾನು ನೀಡಿದ ಉಕ್ತಲೇಖನದಂತೆ ಲ್ಯಾಪ್ ಟಾಪ್ ನಲ್ಲಿ ಟೈಪ್ ಮಾಡಿರುತ್ತಾರೆ.

ಸಾಕ್ಷಿಯು ನಿಪಿ.5 ರ ಭಾವಚಿತ್ರವನ್ನು ಮಹಜರ್ ಸಮಯಲಾಗಿರುತ್ತದೆ ಎಂದು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಗೆ ಪ್ರಮಾಣ ಪತ್ರವನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಪ್ರಮಾಣ ಪತ್ರವನ್ನು ನಿಪಿಃ9 ಅಂತ, ಸಾಕ್ಷಿಯ ಸಹಿಯನ್ನು ನಿಪಿಃ 9(ಎ) ಅಂತ ಗುರುತಿಸಲಾಯಿತು. ಸಿಡಿಯನ್ನು ನಿಪಿ.10 ಅಂತ ಗುರುತಿಸಲಾಯಿತು.

ದಿನಾಂಕ 08.10.2025 ರಂದು ಚಾಸಾ-6 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ದಿನಾಂಕ 07.10.2025 ರಂದು ಚಾಸಾ-1 ರವರ ಮುಂದುವರೆದ ಹೇಳಿಕೆಯನ್ನು ಪಡೆದಿರುತ್ತೇನೆ.

ದಿನಾಂಕ 05.10.2025 ರಂದು ಚಾಸಾ-8 ಮತ್ತು 9 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ.

ದಿನಾಂಕ 04.12.2025 ರಂದು ಆರೋಪಿಯ ವಿರುದ್ಧ ಅಪರಾಧ ದೃಢಪಟ್ಟ ಮೇರೆಗೆ ಘನ ನ್ಯಾಯಾಲಯಕ್ಕೆ ದೋಷರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀಮತಿ ಬಿ.ಜಿ., ಆರೋಪಿ ಪರ ವಕೀಲರಿಂದಃ**

ಚಾಸಾ-1 ರವರು ಕಳ್ಳತನವಾಗಿದೆ ಎಂದು ಹೇಳಲಾದ ವಾಹನದ ಮಾಲೀಕರಲ್ಲ ಎಂದರೆ ಎಂದರೆ ಸರಿಯಲ್ಲ. ಚಾಸಾ-1 ರವರು ನೀಡಿದ ಮುಂದದುವರೆದ ಹೇಳಿಕೆಯಲ್ಲಿ ಕಳ್ಳತನವಾದ ವಾಹನದ ಮಾಲೀಕರು ಬೆಟ್ಟಪ್ಪ ಎಂದು ಹೇಳಿರುತ್ತಾರೆ ಎಂದರೆ ಸರಿ. ಬೆಟ್ಟಪ್ಪರವರನ್ನು ಈ

ಪ್ರಕರಣದಲ್ಲಿ  ಸಾಕ್ಷಿದಾರರನ್ನಾಗಿ ಸೇರಿಸಲು ತೊಂದರೆ ಇರಲಿಲ್ಲ. ಚಾಸಾ-6 ರವರಿಂದ ಎರಡು ವಾಹನನಳ್ಳು ಜಪ್ತು ಪಡಿಸಿಕೊಂಡಿರುತ್ತೇನೆ. ಚಾಸಾ-6 ರವರು ಇನ್ನೊಬ್ಬರ ಸಹಾಯದಿಂದ ಎರಡು ಬೈಕ್ ಗಳನ್ನು ಚಾಲನೆ ಮಾಡಿಕೊಂಡು ಒಂದೇ ಸಮಯದಲ್ಲಿ ಹಾಜರು ಪಡಿಸಿರುತ್ತಾರೆ.  ಚಾಸಾ-6 ರವರಿಗೆ ಸಹಾಯ ಮಾಡಿದ ಇನ್ನೊಬ್ಬ ವ್ಯಕ್ತಿಯನ್ನು ಈ ಪ್ರಕರಣದಲ್ಲಿ ಸಾಕ್ಷಿಯನ್ನಾಗಿ ಸೇರಿಸಿರುವುದಿಲ್ಲ. ಆರೋಪಿಯ ಸ್ವ ಇಚ್ಛಾ ಹೇಳಿಕೆಯಲಿಲನ ಕ್ರಮ ಸಂಖ್ಯೆ 12  ಮತ್ತು 13 ಒಂದೇ ವಾಹನಕ್ಕೆ ಸಂಬಂಧಿಸಿರುತ್ತದೆ ಎಂದರೆ ಸರಿಯಲ್ಲ.

ಆರೋಪಿಯು ಯಾವುದೇ ತಪ್ಪು ಮಾಡದೇ ಇದ್ದರೂ ಸುಳ್ಳು ದೋಷರೋಪಣ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ